**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂ: 228/2018 ಸಿ.ಡಬ್ಲ್ಯೂ –೭ ಪಿ.ಡಬ್ಲ್ಯೂ -೫

| | | |
|---|---|---|
| ಹೆಸರು | : | ಅಮೃತ |
| ತಂದೆ: ಗಂಡ | : | ಶರಣಪ್ಪ |
| ವಯಸ್ಸು | : | ೬೫ ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಕೊರಳ್ಳಿ |

ದಿನಾಂಕ:೨೩.೦೨.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ :**

ಆರೋಪಿಯ ಪರಿಚಯ ಇರುವುದಿಲ್ಲ. ಮೃತ ಅಣ್ಣಪ್ಪ ನನ್ನ ಸಹೋದರ ಚಾಸಾ-6 ಚಾಸಾ-1 ರವರ ಹೆಂಡತಿ. ಚಾಸಾ-8 ಚಾಸಾ-1 ರವರ ಮಗ. ಚಾಸಾ-2 ರಿಂದ 5, 9 ರಿಂದ 15 ರವರ ಪರಿಚಯ ಇರುತ್ತದೆ. 2017 ರಲ್ಲಿ ಅಪಘಾತವಾಗಿರುತ್ತದೆ. ಅಪಘಾತದ ಹಿನ್ನೆಲೇಯಲ್ಲಿ ಕಲಬುರಗಿ ಬಾಬಾ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು, ನಾನು ಅಲ್ಲಿ ಹೋಗಿ ನೋಡಿದೆನು. ಅಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರು ಆಸ್ಪತ್ರೆಗೆ ಬರೆದು ಕೊಟ್ಟರು. ನಂತರ ಬೆಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಚಾಸಾ-1 ರವರು ತೀರಿಕೊಂಡರು ಎಂದು ಚಾಸಾ-8 ರವರು ನನಗೆ ತಿಳಿಸಿದರು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು : ಸ.ಸ.ಅ. ವಕೀಲರಿಂದ.**

ಚಾಸಾ-1 ರವರು ತಮ್ಮ ಮೊಟರ್ ಸೈಕಲ್ ಕೆ.ಎ. 32 ಇ.ಎಲ್ 0534 ರ ಮೇಲೆ ಭೂಸನೂರು ಫ್ಯಾಕಟ್ರಿ ಬಳಿ ನಡಸಿಕೊಂಡು ಹೋಗುತ್ತಿರುವಾಗ ಜೀಪ್ ನಂ.ಎಂ.ಎಚ್12 ಬಿಜಿ7085 ರ ಚಾಲಕ ಅತೀ ಜೋರಾಗಿ ನಿರ್ಲಕ್ಷತನದಿಂದ ಓಡಿಸಿಕೊಂಡು ಬಂದು ಅಪಘಾತ ಪಡಿಸಿದ್ದಾನೆ ಎಂದು ಸಾಕ್ಷಿಯು ನಾನು ನೋಡಿರುವುದಿಲ್ಲ ಆಸ್ಪತ್ರೆ ಹೋಗಿರುತ್ತೆನೆ ಎಂದು ನುಡಿಯುತ್ತಾರೆ. ಚಾಸಾ-6 ರವರರಿಗೆ ಸದರಿ ಅಪಘಾತದಿಂದ ತೀರ್ವ ಸ್ವರೂಪದ ಗಾಯ ಆಗಿದೆ ಎಂದರೆ ಸರಿ. ಚಾಸಾ-1 ರವರಿಗೆ ತಲೆಗೆ ತರಚಿದ ಗಾಯ , ಬಲಗಾಲಿನ ಮೊಳಕಾಲು ಭಾರಿ ರಕ್ತ ಗಾಯ ಮತ್ತು ಬಲಗಾಲು ಪಾದದ ಮೇಲೆ ಭಾರಿ ರಕ್ತ ಗಾಯ ಮತ್ತು ಬಲಗೈಗೆ ತೀರ್ವ ಸ್ವರೂಪದ ಗಾಯ ಮತ್ತು ಕೈ ಕಟ್ಟ್ ಆಗಿತ್ತು ಎಂದರೆ ಸರಿ. ಚಾಸಾ-9 ರಿಂದ 11 ರವರು ಚಾಸಾ-1 ಮತ್ತು 6 ರವರನ್ನು ಆಸ್ಪೆತ್ರೆಗೆ ಕರೆದುಕೊಂಡು ಬಂದರು ಎಂದರೆ ಸರಿ. ಚಾಸಾ-14 ರವರು ನನಗೆ ಕರೆ ಮಾಡಿ ಅಪಘಾತ ಕುರಿತು ತಿಳಿಸಿದರು ಮತ್ತು ಒಂದು ಖಾಸಗಿ ವಾಹನದಲ್ಲಿ ಕರಲಬುರಗಿ ಬಸವೇಶ್ವರ ಆಸ್ಪತ್ರೆಗೆ ದಾಖಲಿಸಿದರು ಎಂದರೆ ಸರಿ. ಬಸವೇಶ್ವರ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸಗಾಗಿ ಬಾಬಾ ಆಸ್ಪತ್ರೆಗೆ ಕರೆದುಕೊಂಡು ಬಂದೆವು ಎಂದರೆ ಸರಿ. ಚಾಸಾ-8 ಮತ್ತು 15 ರವರ ಚಾಸಾ-1 ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿದರು ಎಂದರೆ ಸರಿ. ದಿ: 01.11.2017 ರಂದು ಮುಂಜಾನೆ 4.50 ಗಂಟೆಗೆ ಚಾಸಾ-1 ರವರು ಚಿಕಿತ್ಸೆ

ಫಲಕಾರಿಯಾಗದ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾನೆ ಎಂದರೆ ಸರಿ. ನಂತರ ನಾನು ಕಲಬುರಗಿ ಶವಗಾರಗೆ ಹೋಗಿ ನೋಡಿರುತ್ತೇನೆ ಎಂದರೆ ಸರಿ. ಈ ರೀತಿಯಾಗಿ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿತರ ಪ**ರ ಶ್ರೀ ಎ.ಡಬ್ಲೂ.ಎ **ವಕೀಲರಿಂದ**

ನಾನು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಅಪಘಾತ ವಿಷಯವನ್ನು ಬೇರೆಯವರ ಮೂಲಕ ನನಗೆ ಗೊತ್ತಾಯಿತು ಎಂದರೆ ಸರಿ. ಚಾಸಾ-೧೫ ನನಗೆ ಕರೆಮಾಡಿ ತಿಳಿಸಿರುತ್ತಾರೆ. ಅಪಘಾತವನ್ನು ನಿಪ್ಪಾಣಿ ತಾಂಡಾದ ರಾಜು ಅನ್ನುವನು ಅಪಘಾತ ಪಡಿಸಿರುತ್ತಾನೆ ಎಂದು ತಿಳಿಸಿರುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ. ಘಟನಾ ಸ್ಥಳದ ಚಕ್ ಬಂದಿಯನ್ನು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಅಪಘಾತ ಕುರಿತು ಪರಿಹಾರ ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿ. ನಾನು ಇದೇ ಮೊದಲಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿ. ಚಾಸಾ-೮ ಮತ್ತು ೬ ರವರಿಗೆ ಸಹಾಯ ಆಗಲಿ ಎಂದು ಸಾಕ್ಷಿ ಹೇಳುಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

ನಾನು ಕಲಬುರಗಿಯ ಖಾಯಂ ನಿವಾಸಿ ಇರುತ್ತೇನೆ. ಚಾಸಾ-೧ ರವರನ್ನು ನಾನು ಬಾಬಾ ಆಸ್ಪತ್ರೆಗೆ ನೋಡಲು ಹೋದಾಗ ಅವರು ಸತ್ತ ಪರಿಸ್ಥಿತಿಯಲ್ಲಿ ಇದ್ದರು ಎಂದರೆ ಸರಿ. ಚಾಸಾ-೧ ರವರಿಗೆ ಬಾಬಾ ಆಸ್ಪತ್ರೆಯಲ್ಲಿ ಪ್ರಜ್ಞೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಯಾವತ್ತು ಬೇಟಿಯಾಗಿರುವುದಿಲ್ಲ. ಚಾಸಾ-೧೪ ಮತ್ತು ೧೫ ರವರು ಕೊರಳ್ಳಿ ಗ್ರಾಮದಿಂದ ನನಗೆ ಕರೆಮಾಡಿ ಅಪಘಾತದ ವಿಷಯ ತಿಳಿಸಿದರು. ಅಪಘಾತ ವಿಷಯವನ್ನು ನನಗೆ ಚಾಸಾ-೧೪ ತಿಳಿಸಿರುತ್ತಾರೆ. ಚಾಸಾ-೧೪ ರವರ ಮೊಬೈಲ್ ಸಂಖ್ಯೆ ನನಗೆ ಹೇಳಲು ಬರುತ್ತದೆ ಆದರೆ ಕಂಟಪಾಟದಿಂದ ನನಗೆ ಹೇಳಲು ಬರುವುದಿಲ್ಲ. ಚಾಸಾ-೮ ಮತ್ತು ಚಾಸಾ-೧೪ ರವರು ನನಗೆ ತಿಳಿಸಿದ ವಿಷಯವನ್ನು ನಾವು ಯಾರ ಮುಂದೆ ಹೇಳಿರುವುದಿಲ್ಲ ಎಂದರೆ ಸರಿ. ನಾನು ಇದೇ ಮೊದಲಬಾರಿಗೆ ನ್ಯಾಯಾಲಯದಲ್ಲಿ ಚಾಸಾ-೧೪ ಮತ್ತು ೧೫ ರವರು ಹೇಳಿರುವ ವಿಷಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವೆದು ಪೋಲಿಸರ ಮುಂದೆ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಪೋಲಿಸರಿಗೆ ಎಲ್ಲಿ ಮತ್ತು ಯಾವ ತಾರಿಖನಂದು ಹೇಳಿದ್ದಿಯಾ ಎಂದರೇ ಸಾಕ್ಷಿಯು ಚಾಸಾ-೮ ರವರಿಗೆ ಕೇಸಮಾಡಿ ಎಂದು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಖುದ್ದಾಗಿ ಪೋಲಿಸರಿಗೆ ಹೇಳಿರುವುದಿಲ್ಲ ಎಂದರೆ ಸರಿ. ನಾನು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಇದೇ ಮೊಟ್ಟ ಮೊದಲಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. ಚಾಸಾ-೬ ಮತ್ತು ೮ ರವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ಖುದ್ದಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ